
ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » MYSURU
ಶುಕ್ರವಾರ 22 ಡಿಸೆಂಬರ್ 2023
22 DECEMBER 2023

# ನಿರ್ಮಾಣ ಕ್ಷೇತ್ರದಲ್ಲಿ ತಾಂತ್ರಿಕ ಅವಲಂಬನೆ ಹೆಚ್ಚಳ



ನಗರದ ಬನ್ನೂರು ರಸ್ತೆಯ ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನಲ್ಲಿ ಗುರುವಾರ ಹಮ್ಮಿಕೊಂಡಿದ್ದ ಪುನಶ್ಚೇತನ ಕಾರ್ಯಾಗಾರದಲ್ಲಿ ಎಂ.ಜಿ.ಸೋಮಶೇಖರ್, ಡಾ.ಎ.ಕೆ. ಮೂರ್ತಿ, ಡಾ. ಎಲ್. ಬಸವರಾಜ್, ಡಾ. ಎಸ್.ಆರ್. ಭಾಗ್ಯಶ್ರೀ ಇತರರು ಇದ್ದರು.

■ ವಿಜಯವಾಣಿ ಸುದ್ದಿಜಾಲ ಮೈಸೂರು

ನಗರದ ಬನ್ನೂರು ರಸ್ತೆಯ ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕೇಂದ್ರ ಸರ್ಕಾರದ ಅಟಲ್ ಅಕಾಡೆಮಿ ಹಾಗೂ ಎಐಸಿಟಿಇ ಪ್ರಾಯೋಜಕತ್ವದಲ್ಲಿ ಸಿವಿಲ್ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ತಂತ್ರಜ್ಞಾನದ ಬಳಕೆ ಮತ್ತು ನೂತನ ಆವಿಷ್ಕಾರಗಳ ಕುರಿತು ಅಧ್ಯಾಪಕರಿಗೆ ಗುರುವಾರ ಪುನಶ್ಚೇತನ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

» **ಎಂ.ಜಿ. ಸೋಮಶೇಖರ್ ಅಭಿಮತ**

» **ಎಟಿಎಂಇ ಕಾಲೇಜಿನಲ್ಲಿ ಪುನಶ್ಚೇತನ ಕಾರ್ಯಾಗಾರ**

ಕಾರ್ಯಾಗಾರ ಉದ್ಘಾಟಿಸಿದ ಪಿ.ಜಿ. ಸೆಟ್ಟಿ ಕನ್‌ಸ್ಟ್ರಕ್ಷನ್ ಕಂಪನಿ ಮುಖ್ಯ ನಿರ್ದೇಶಕ ಎಂ.ಜಿ. ಸೋಮಶೇಖರ್ ಮಾತನಾಡಿ, ದೇಶದಲ್ಲಿ ಇತ್ತೀಚೆಗೆ ಶರವೇಗದಲ್ಲಿ ತಾಂತ್ರಿಕತೆ ಬೆಳವಣಿಗೆ ಯಾಗುತ್ತಿದೆ. ಕೃಷಿ, ಕೈಗಾರಿಕೆ ಸೇರಿದಂತೆ ನಿರ್ಮಾಣ ಕ್ಷೇತ್ರದಲ್ಲೂ ತಂತ್ರಜ್ಞಾನದ ಬಳಕೆ ದಿನೇ ದಿನೆ ಹೆಚ್ಚುತ್ತಿದೆ ಎಂದರು. ದೇಶದ ಬೆಳವಣಿಗೆಯಲ್ಲಿ ನಿರ್ಮಾಣ ಕ್ಷೇತ್ರದ ಕೊಡುಗೆ ಅಪಾರವಾಗಿದೆ. ಮಾನವ ಶಕ್ತಿ ಅವಲಂಬಿತ ಉದ್ಯೋಗಗಳ ಮೇಲೆ ಇದು ವ್ಯತಿರಿಕ್ತ ಪರಿಣಾಮ ಬೀರಿದರೂ ತಾಂತ್ರಿಕತೆ ಸಹಾಯದಿಂದ ಕೆಲಸಗಳನ್ನು ತ್ವರಿತವಾಗಿ ಮಾಡಿ ಮುಗಿಸಬಹುದಾಗಿದೆ. ಇದರಿಂದ ಸಮಯದ ಉಳಿತಾಯ ಹಾಗೂ ಕ್ಲಿಷ್ಟಕರ ಕೆಲಸಗಳನ್ನು ನಿರಾಯಾಸವಾಗಿ ಮಾಡಬಹುದಾಗಿದೆ. ಹಾಗಾಗಿ ಮುಂದಿನ ದಿನ ಗಳಲ್ಲಿ ನಿರ್ಮಾಣ ಕ್ಷೇತ್ರದಲ್ಲಿ ತಾಂತ್ರಿಕತೆಯ ಅವಲಂಬನೆ ಹೆಚ್ಚಲಿದೆ ಎಂದು ಅಭಿಪ್ರಾಯ ಪಟ್ಟರು.

ಪ್ರಾಂಶುಪಾಲ ಡಾ.ಎ.ಕೆ.ಮೂರ್ತಿ, ಐಕ್ಯೂಎಸಿ ನಿರ್ದೇಶಕ ಡಾ.ಎಲ್. ಬಸವರಾಜ್, ಡೀನ್‌ಗಳಾದ ಡಾ.ಎಂ.ಎಸ್. ಗೋವಿಂದೇಗೌಡ, ಡಾ.ಎಸ್.ಆರ್. ಭಾಗ್ಯಶ್ರೀ, ಡಾ.ಕೆ.ನಿವಾಸ್, ಡಾ.ಸುನೀತ್ ಕುಮಾರ್, ಡಾ.ಶೇಷಾದ್ರಿ ಶೇಖರ್, ಪ್ರೊ.ಮನು ವಿಜಯ್, ಕಾರ್ಯಾಗಾರದ ಆಯೋಜಕರಾದ ಪ್ರೊ.ಶ್ರೀವತ್ಸ, ಪ್ರೊ. ಪುನೀತ್ ಇತರರು ಇದ್ದರು.